**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರಕಛೇರಿ ನಡವಳಿಗಳು**

**ವಿಷಯ:** 2020-21ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಲಾಕ್ ಡೌನ್‌ಅವಧಿಯ ಅತಿಥಿ ಉಪನ್ಯಾಸಕರ ಗೌರವಧನ ವ್ಯತ್ಯಾಸದ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ**
1. ಸರ್ಕಾರದ ಆದೇಶ ಸಂಖ್ಯೆ:ಇಡಿ:166:ಹೆಚ್‌ಪಿಸಿ:2020 ದಿನಾಂಕ:13.11.2020
2. ಈ ಕಛೇರಿಯ ಸಮಸಂಖ್ಯೆಯ ಆದೇಶ ಸಂಖ್ಯೆಯ ದಿನಾಂಕ:04.12.2020 ಮತ್ತು 16.12.2020.
3. ವಿವಿಧ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳು.

******

**ಪ್ರಸ್ತಾವನೆ:**

ಸರ್ಕಾರದ ಆದೇಶ ಸಂಖ್ಯೆ:ಇಡಿ:166:ಹೆಚ್‌ಪಿಸಿ:2020 ದಿನಾಂಕ:13.11.2020ರ ಪ್ರಕಾರ ಕೋವಿಡ್-19 ಸಾಂಕ್ರಾಮಿಕ ಖಾಯಿಲೆ ಹಿನ್ನಲೆಯಲ್ಲಿ ಲಾಕ್‌ಡೌನ್ ಆದ ಪ್ರಯುಕ್ತ ಈ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದ ಅತಿಥಿ ಉಪನ್ಯಾಸಕರುಗಳಿಗೆ ಮಾರ್ಚ್-2020(24.12.2020) ರಿಂದ ಆಗಸ್ಟ್-2020ರ 5 ತಿಂಗಳ ಅವಧಿಯನ್ನು ಕರ್ತವ್ಯದ ಅವಧಿ ಎಂದು ಹಾಗೂ ವಿಶೇಷ ಪ್ರಕರಣವೆಂದು ಪರಿಗಣಿಸಿ ರೂ.85,91,77,857/- ಅನುದಾನವನ್ನು ಬಿಡುಗಡೆ ಮಾಡಲು ಅನುಮತಿಯನ್ನು ನೀಡಲಾಗಿರುತ್ತದೆ. ಅದರಂತೆ ಈ ಕಛೇರಿಯ ಸಮ ಸಂಖ್ಯೆಯ ಆದೇಶ ದಿನಾಂಕ:04.12.2020 ಮತ್ತು ದಿನಾಂಕ:16.12.2020ರ ಪ್ರಕಾರ ದಿನಾಂಕ:24.03.2020 ರಿಂದ ದಿನಾಂಕ:23.08.2020ರ ಅವಧಿಗೆ ಗೌರವಧನ ಪಾವತಿಗೆ ಅನುದಾನವನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

ತದನಂತರ ಮೇಲೆ ತಿಳಿಸಿರುವಂತೆ ಲಾಕ್‌ಡೌನ್ ಅವಧಿಗೆ ಅನುದಾನ ಬಿಡುಗಡೆ ಮಾಡಿದ ನಂತರ ಸದರಿ ಅವಧಿಗೆ ಕಾಲೇಜುಗಳಿಂದ ನೀಡಲಾದ ತಪ್ಪು ಮಾಹಿತಿಯಂತೆ ಅವಶ್ಯಕ್ಕಿಂತ ಕಡಿಮೆ ಅನುದಾನ ಬಿಡುಗಡೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಮೇಲಿನ ಉಲ್ಲೇಖ-2ರಲ್ಲಿ ತಿಳಿಸಿರುವ ಒಟ್ಟು 20 ಕಾಲೇಜುಗಳಿಂದ ರೂ.55,74,345/-ಗಳ ಅನುದಾನ ಕೋರಿ ಪ್ರಸ್ತಾವನೆ ಸ್ವೀಕೃತವಾಗಿರತ್ತದೆ. ಈ ಪೈಕಿ 19 ಕಾಲೇಜುಗಳಿಗೆ ರೂ.54,42,334/- ಬಿಡುಗಡೆ ಮಾಡಬೇಕಾಗಿದ್ದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳ್ಳಿಗೆ ಸಂಬಂಧಿಸಿದಂತೆ ಸದರಿ ಕಾಲೇಜಿನಲ್ಲಿ ಬಾಕಿ ಉಳಿದಿರುವ ಅನುದಾನದ ಮೊತ್ತ ರೂ.52,871/- ರಲ್ಲಿ ರೂ.24,798/- ಪಾವತಿಸಲು ಸೂಚನೆ ನೀಡಬಹುದಾಗಿರುತ್ತದೆ. ಗೌರವಧನ ಪಾವತಿಸಬೇಕಾಗಿರುವ ಒಟ್ಟು ಅನುದಾನದ ಮೊತ್ತ ರೂ.54,42,334/- ಗಳನ್ನು ಲೆಕ್ಕ ಶೀರ್ಷಿಕೆ:2202-03-103-2-01-324ರಡಿಯಲ್ಲಿ ಬಿಡುಗಡೆ ಮಾಡಬೇಕಾಗಿರುತ್ತದೆ. ಅದರಂತೆ 19 ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಗೌರವಧನ ಪಾವತಿಗಾಗಿ ಬಿಡುಗಡೆ ಮಾಡಲು ಈ ಆದೇಶ

**ಆದೇಶ ಸಂಖ್ಯೆ: ಕಾಶಿಇ:ಆಯವ್ಯಯ:ಅ.ಉ.ಸ:07:2020-21, ಬೆಂಗಳೂರು, ದಿನಾಂಕ:27.01.2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಉಲ್ಲೇಖ(1)ರ ಸರ್ಕಾರದ ಆದೇಶದಂತೆ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಈ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುವರಿಗೆ ಲಾಕ್‌ಡೌನ್ ಅವಧಿಯಲ್ಲಿ ಮಾರ್ಚ್-2020(24.12.2020) ರಿಂದ ಆಗಸ್ಟ್-2020ರ 5 ತಿಂಗಳ ಅವಧಿಗೆ ಅನುದಾನ ಬಿಡುಗಡೆ ಮಾಡಿದ ನಂತರ ಕೊರತೆ ಉಂಟಾದ ಹಿನ್ನೆಲೆಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ 19 ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವಧನ ಪಾವತಿಸುವ ಸಂಬಂಧ ಲೆಕ್ಕ ಶೀರ್ಷಿಕೆ:2202-03-103-2-01-324ರಡಿಯಲ್ಲಿ ರೂ.54,42,334/-(ಐವತ್ತನಾಲ್ಕು ಲಕ್ಷದ ನಲವತ್ತೇರಡು ಸಾವಿರದ ಮೂನ್ನೂರ ಮೂವತ್ತನಾಲ್ಕು ಮಾತ್ರ) **ಅನುದಾನವನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ.**ಈ ಕೆಳಕಂಡ ಷರತ್ತಿಗೊಳಪಟ್ಟು ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ

**ಷರತ್ತುಗಳು:**

1.2019-20ನೇ ಸಾಲಿಗೆ ಸರ್ಕಾರದ ಆದೇಶ/ಸುತ್ತೋಲೆ ಅಂತಿಮವಾಗಿ ಆಯ್ಕೆಗೊಂಡು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಿಂದ ಅನುಮೋದನೆಗೊಂಡಿರುವ (ನೇಮಕಾತಿ ದಿನಾಂಕ, ಅವಧಿ ಮತ್ತು ಹಂಚಿಕೆಯಾಗಿರುವ ಕಾರ್ಯಭಾರಕ್ಕೆತಕ್ಕಂತೆ) ಮಾತ್ರ ಗೌರವಧನವನ್ನು ಪಾವತಿಸತಕ್ಕದ್ದು. ಹಾಗೂ ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಂದ ಅನುಮೋದನೆಗೊಂಡಿಲ್ಲದ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಪಾವತಿಸಿದ್ದಲ್ಲಿ, ಹೆಚ್ಚುವರಿಯಾಗಿ ಪಾವತಿಯಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

2.ಕಛೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾರ್ಗಸೂಚಿಯಂತೆ ವಿಭಾಗವನ್ನು(Section) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಭಾಗಿಸಿ ಅದರಂತೆ ಕಾರ್ಯಭಾರವನ್ನು ಲೆಕ್ಕ ಮಾಡಿ ಹೆಚ್ಚುವರಿ ಕಾರ್ಯಭಾರದಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಗರಿಷ್ಠ 8/10 ಗಂಟೆಗಳ ಕಾರ್ಯಭಾರವನ್ನು ಹಂಚಿರಬೇಕು. ಅತಿಥಿ ಉಪನ್ಯಾಸಕರುಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದ 8/10 ಗಂಟೆಗಳ ಕಾರ್ಯಭಾರವನ್ನು ಇಬ್ಬರು ಅತಿಥಿ ಉಪನ್ಯಾಸಕರುಗಳಿಗೆ ಹಂಚಿಕೆಮಾಡುವುದಾಗಲಿ ಅಥವಾ ನಿಯಮ ಉಲ್ಲಂಘಿಸಿ ಹೆಚ್ಚುವರಿ ಕಾರ್ಯಭಾರ ಲೆಕ್ಕಚಾರ ಮಾಡಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಗೌರವಧನ ಪಾವತಿಸುವಂತಿಲ್ಲ. ಹೆಚ್ಚು ಸಂಭಾವನೆ ನೀಡಿದಲ್ಲಿ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ವಿಷಯ/ವಿಭಾಗದ ಮುಖ್ಯಸ್ಥರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು

3.ಸರ್ಕಾರದ ಆದೇಶ ಸಂಖ್ಯೆ:ಇಡಿ:66:ಡಿಸಿಇ:2017:ಬೆಂಗಳೂರು, ದಿನಾಂಕ: 04-04-2017ರ ಅನ್ವಯ ಎನ್.ಇ.ಟಿ/ ಎಸ್.ಎಲ್.ಇ.ಟಿ/ಪಿಹೆಚ್.ಡಿ. ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ರೂ.13,000-00 ದಂತೆ ಹಾಗೂ ಸ್ನಾತಕೋತ್ತರ ಪದವಿ ಪಡೆದ (ಕನಿಷ್ಠ ಶೇಕಡ 55ರ ಅಂಕಗಳನ್ನು ಪಡೆದಿರುವ) ಅತಿಥಿ ಉಪನ್ಯಾಸಕರಿಗೆ ರೂ.11,000-00 ಗಳಂತೆ ಪಾವತಿಸಲು ಸೂಚಿಸಲಾಗಿದೆ.

4.ಪ್ರಾಂಶುಪಾಲರಿಂದ ಸ್ವೀಕೃತವಾಗಿ ಪ್ರಸ್ತಾವನೆಯ ಆಧಾರದ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಿದ್ದು, ಗೌರವಧನ ಪಾವತಿ ಮಾಡುವಾಗ ಆದೇಶದಲ್ಲಿ ಬಿಡುಗಡೆ ಮಾಡಿರುವ ಅವಧಿಗೆ ಮಾತ್ರ ಪಾವತಿಸಲು ಕಟ್ಟುನಿಟ್ಟಾಗಿ ಸೂಚಿಸಿದ್ದು, ಬೇರೆ ಅವಧಿಗೆ ಗೌರವಧನ ಪಾವತಿಸಿದ್ದಲ್ಲಿ ಸೂಕ್ತ ಕ್ರಮವಹಿಸಲಾಗುವುದು.

5.ಯಾವುದೇ ಕಾರಣಕ್ಕೂ ಬಿಡುಗಡೆ ಮಾಡಲಾದ ಅನುದಾನವನ್ನು ವಿತರಿಸದೇ ಉಳಿಸಿಕೊಂಡು ಅತಿಥಿ ಉಪನ್ಯಾಸಕರುಗಳಿಂದ ದೂರು ಬಂದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರು ಮತ್ತು ಸಂಬಂಧಿಸಿದವರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

6.ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ದಿನಾಂಕ:01.02.2021ರೊಳಗೆ ಪಾವತಿಸಿ ಅನುದಾನವನ್ನು ಬಳಸಿಕೊಂಡ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ದಿನಾಂಕ:02.02.2021ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಇ-ಆಫೀಸ್ ಮುಖಾಂತರ ಅನುಮೋದಿಸಲ್ಪಟ್ಟಿದೆ)**

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

ಸಂಬಂಧಿಸಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

**ಪ್ರತಿಯನ್ನು:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ -ಮಾಹಿತಿ ಹಾಗೂ ತಮ್ಮ ಕಛೇರಿ ವ್ಯಾಪ್ತಿಯ ಕಾಲೇಜುಗಳಲ್ಲಿ ನಿಗಧಿತ ಅವಧಿಯಲ್ಲಿ ಗೌರವಧನ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರಕಛೇರಿ, ಬೆಂಗಳೂರು - ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

ಕೋವಿಡ್-19 ಹಿನ್ನಲೆಯಲ್ಲಿ ಲಾಕ್‌ಡೌನ್ ಪ್ರಯುಕ್ತ ಮಾರ್ಚ್-2020 ರಿಂದ ಆಗಸ್ಟ್-2020ರ ಅವಧಿಯನ್ನು ಕರ್ತವ್ಯ ಅವಧಿ ಎಂದು ಪರಿಗಣಿಸಿ ಅನುದಾನ ಬಿಡುಗಡೆ ಮಾಡಲಾದ ಸದರಿ ಅವಧಿಗೆ ಸಂಬಂಧಪಟ್ಟ ಕಾಲೇಜುಗಳಿಗೆ ವ್ಯತ್ಯಾಸದ ಮೊತ್ತಕ್ಕೆ ಅನುದಾನ ಬಿಡುಗಡೆ ಮಾಡಿರುವ ಪಟ್ಟಿ

ಆದೇಶ ಸಂಖ್ಯೆ ಕಾಶಿಇ/ಆಯವ್ಯಯ/ಅಉಸ/07:2020-21 ದಿನಾಂಕ:27.01.2021 ಕ್ಕೆ ಅನುಬಂಧ

| ಕ್ರ ಸಂ | ಕಾಲೇಜಿನ ಹೆಸರು | ಗೌರವ ಧನದ ಮೊತ್ತ | ಕಾಲೇಜು ಹಂತದಲ್ಲಿ ಉಳಿಕೆ ಇರುವ ಅನುದಾನದ ಮೊತ್ತ | ಉಳಿಕೆ ಅನುದಾನದಲ್ಲಿ ಹೊಂದಾಣಿಕೆ ನಂತರ ಬಿಡುಗಡೆ ಮಾಡಿರುವ ಅನುದಾನ |
|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆನೇಕಲ್ | 82448 | 0 | 82448 |
| 2 | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ದೊಡಬಳಾಪುರ | 27225 | 0 | 27225 |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ | 8403 | 0 | 8403 |
| 4 | ಸರ್ಕಾರಿ ಮಹಿಳಾ ಕಾಲೇಜು, ಕೋಲಾರ | 182000 | 0 | 182000 |
| 5 | ಸರ್ಕಾರಿ ಮಹಾ ವಿದ್ಯಾಲಯ(ಸ್ವಾಯತ್ತ), ಮಂಡ್ಯ | 52808 | 0 | 52808 |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಣಾವರ | 25170 | 0 | 25170 |
| 7 | ವೇದಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು | 1810368 | 0 | 1705403 |
| 8 | ಸ.ಪ್ರ.ದ. ಕಾಲೇಜು,ಕೊಪ್ಪ, ಚಿಕ್ಕಮಗಳೂರು, ಜಿಲ್ಲೆ | 929481 | 0 | 929481 |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಳಸ | 5967 | 0 | 5967 |
| 10 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ | 692108 | 0 | 692108 |
| 11 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ | 152813 | 0 | 152813 |
| 12 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳ್ಳಿ | 24798 | 52871 | 0 |
| 13 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅನವಟ್ಟಿ | 11100 | 0 | 11100 |
| 14 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಯಗೊಂಡ | 217622 | 0 | 217622 |
| 15 | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮಂಗಳೂರು, | 553234 | 0 | 553234 |
| 16 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ | 412460 | 2248 | 410212 |
| 17 | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಧಾರಾವಾಡ | 17409 | 0 | 17409 |
| 18 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಧೋಳ | 284485 | 0 | 284485 |
| 19 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಂಪುರ | 29463 | 0 | 29463 |
| 20 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಣೆಬೆನ್ನೂರು | 54983 | 0 | 54983 |
| | **ಒಟ್ಟು ಮೊತ್ತ** | **5574345** | **55119** | **5442334** |

(ರೂ. ಐವತ್ತನಾಲ್ಕು ಲಕ್ಷದ ನಲವತ್ತೆರಡು ಸಾವಿರದ ಮೂರುನೂರ ಮೂವತ್ತನಾಲ್ಕು ರೂಪಾಯಿಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು